ಜನಗಳ ಮನ

ವಿಶ್ವೇಶ್ವರ ಭಟ್
vbhat@vijaykarnataka.com

ಒಂದು ಕೋಟಿ ರೂ. ಆಶ್ವಾಸನೆ ಈಡೇರಿಕೆಗೆ ಒಂದು ವರ್ಷ ಬೇಕೇ?

ಕರ್ನಾಟಕ ಸರಕಾರಕ್ಕೆ ಒಂದು ಕೋಟಿ ರೂ. ಅದೇನು ಮಹಾ? ಆದರೂ ಆ ಒಂದು ಕೋಟಿ ರೂ.ಯನ್ನು ವರ್ಷ ಕಳೆದು ಮೇಲೆ ಎರಡು ತಿಂಗಳಾದರೂ ಕೊಟ್ಟಿಲ್ಲ ಅಂದ್ರೆ ಏನೆನ್ನೋಣ?

ಈ ಬಗ್ಗೆ ತುಸು ವಿವರಿಸಿ ಹೇಳಬೇಕು. 2008ರ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬಹರೇನ್‌ಗೆ ಹೋಗಿದ್ದರು. ಅವರ ಜತೆಯಲ್ಲಿ ಸಚಿವರಾದ ರಾಮಚಂದ್ರ ಗೌಡ ಹಾಗೂ ಶೋಭಾ ಕರಂದ್ಲಾಜೆ ಸಹ ಇದ್ದರು. ಬಹರೇನ್ ಕನ್ನಡ ಸಂಘದ ವಾರ್ಷಿಕೋತ್ಸವದಲ್ಲಿ ಮುಖ್ಯಮಂತ್ರಿಯವರು ಪಾಲ್ಗೊಂಡಿದ್ದರು. ಆ ಸಂಘದ ಕನ್ನಡ ಪ್ರೇಮ, ಚಟುವಟಿಕೆ, ಕ್ರಿಯಾಶೀಲತೆ ಮುಖ್ಯ ಮಂತ್ರಿಯವರಿಗೆ ಬಹಳ ಹಿಡಿಸಿರಬೇಕು. ಕನ್ನಡ ಸಂಘದ ಕಟ್ಟಡವನ್ನು ವೀಕ್ಷಿಸಿದ ಮುಖ್ಯಮಂತ್ರಿಯವರು ಕೆಲಕಾಲ ಅಲ್ಲಿ ಕಳೆದಿದ್ದರು.

ವಿದೇಶಗಳಲ್ಲಿ ಹಲವಾರು ಕನ್ನಡ ಸಂಘಗಳಿದ್ದರೂ ಸುಸಜ್ಜಿತ, ಸ್ವಂತ ಕಟ್ಟಡ ಹೊಂದಿದ ಏಕಮಾತ್ರ ಸಂಘವೆಂದರೆ ಬಹರೇನ್ ಕನ್ನಡ ಸಂಘ. ಇನ್ನೆರಡು ವರ್ಷಗಳಲ್ಲಿ ಕಟ್ಟಡದ ಲೀಸ್ ಅವಧಿ ಮುಗಿಯುವುದರಿಂದ ಅಷ್ಟರೊಳಗೆ ತನ್ನದೇ ಆದ ಕಟ್ಟಡವನ್ನು ಹೊಂದಲೇಬೇಕಾದ ಅಗತ್ಯವಿದೆ. ಅಲ್ಲದೇ ಬಹರೇನ್‌ನಲ್ಲಿರುವ ಬಹುತೇಕ ಕನ್ನಡಿಗರಿಗೆ ಕನ್ನಡಸಂಘವೆಂದರೆ ಎರಡನೆಯ ಮನೆಯಿದ್ದ ಹಾಗೆ. ಇನ್ನು ಕೆಲವರು ಹೇಗೆಂದರೆ ಸಮಯ ಸಿಕ್ಕರೆ ಅವರ ಮನೆಗಳಿಗೆ ಹೋಗುತ್ತಾರೆ. ಅಲ್ಲಿನ ಕನ್ನಡ ಸಂಘ ಎಲ್ಲ ರೀತಿಯಿಂದಲೂ ಕನ್ನಡ ಕಾಯಕದಲ್ಲಿ ತೊಡಗಿಸಿಕೊಂಡಿದೆ.

ಈ ಎಲ್ಲ ಸಂಗತಿಗಳನ್ನು ಯಡಿಯೂರಪ್ಪ ಗಮನಿಸಿರಬೇಕು, ಕನ್ನಡ ಸಂಘದ ಕಾರ್ಯಚಟುವಟಿಕೆಯಿಂದ ಅವರಿಗೆ ಸಂತಸವಾಗಿರಬೇಕು. ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಮುಖ್ಯಮಂತ್ರಿಯವರು, ಬಹರೇನ್ ಕನ್ನಡಸಂಘಕ್ಕೆ ರಾಜ್ಯ ಸರಕಾರದಿಂದ ಒಂದು ಕೋಟಿ ರೂ. ನೀಡುವುದಾಗಿ ಪ್ರಕಟಿಸಿದರು. ಚಪ್ಪಾಳೆ ಬಂತು. ಬಹರೇನ್ ಕನ್ನಡಿಗರು ಮುಖ್ಯಮಂತ್ರಿಗಳ ಹೃದಯವೈಶಾಲ್ಯ ಹಾಗೂ ಸ್ಪಂದನೆಗೆ ತಲೆದೂಗಿದರು. ಕನಸುಮನಸಿನಲ್ಲಿಯೂ ಅವರು ಯಡಿಯೂರಪ್ಪನವರಿಂದ ಇಂಥ 'ಅಚ್ಚರಿ'ಯನ್ನು ನಿರೀಕ್ಷಿಸಿರಲಿಲ್ಲ.

ಹಾಗೆ ಘೋಷಿಸಿದ ಒಂದೆರಡು ವಾರಗಳಲ್ಲಿ ಹಣ ಬಂದುಬಿಡಬಹುದೆಂದು ಯಾರೂ ಅಪೇಕ್ಷಿಸುವುದಿಲ್ಲ ಬಿಡಿ. ಆದರೆ ಸ್ವತಃ ಮುಖ್ಯಮಂತ್ರಿಯವರು ಆಶ್ವಾಸನೆ ನೀಡಿ ಹದಿನಾಲ್ಕು ತಿಂಗಳುಗಳಾದವು. ಒಂದು ಕೋಟಿ ರೂ. ಅಲ್ಲ, ಒಂದು ಪೈಸೆ ಕೂಡ ಅವರಿಗೆ ಹೋಗಿಲ್ಲ! ಇಂದು ಬರಬಹುದು, ನಾಳೆ ಬರಬಹುದು ಎಂದು ಕಾದು ಕಾದು ಈಗ ಆ ಬಗ್ಗೆ ಮಾತಾಡುವುದೇ ಒಂದು ಅವಮಾನದ ವಿಷಯವಾಗಿದೆ ಅಲ್ಲಿನ ಕನ್ನಡ ಸಂಘದವರಿಗೆ. ಅದಕ್ಕಿಂತ ಹೆಚ್ಚಾಗಿ ಅದೊಂದು ದೊಡ್ಡ ಜೋಕ್ ಆಗಿ ಪರಿಣಮಿಸಿದೆ.

ಇಲ್ಲಿ ಯಡಿಯೂರಪ್ಪನವರನ್ನು ಟೀಕಿಸಿ ಪ್ರಯೋಜನವಿಲ್ಲ, ಮುಖ್ಯಮಂತ್ರಿಯವರ ಆಶ್ವಾಸನೆಯನ್ನು ಜಾರಿಗೆ ತರಬೇಕಾದುದು ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿ. ಅವರಾದರೂ (ಅಧಿಕಾರಿಗಳು) ಮುಖ್ಯಮಂತ್ರಿಯವರಿಗೆ ಅವರೇ ನೀಡಿದ ಆಶ್ವಾಸನೆಯನ್ನು ನೆನಪು ಮಾಡಿಕೊಟ್ಟು ಹಣ ಬಿಡುಗಡೆಗೆ ಶೀಘ್ರ ಕಾರ್ಯತತ್ಪರರಾಗಬೇಕಿತ್ತು. ಆದರೆ ಅಂಥ ಪ್ರಯತ್ನವಾಗಿಲ್ಲ.

ಮೊನ್ನೆ ಡಿಸೆಂಬರ್‌ನಲ್ಲಿ ಬಹರೇನ್ ಕನ್ನಡ ಸಂಘ 32ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಆ ಸಮಾರಂಭದಲ್ಲಿ ನಾನು ಅಧ್ಯಕ್ಷನಾಗಿ ಪಾಲ್ಗೊಂಡಿದ್ದೆ. ಅನಿವಾಸಿ ಕನ್ನಡಿಗರ ಘಟಕದ ಮುಖ್ಯಸ್ಥರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಕಾರ್ಣಿಕ್ ಅವರ ಭಾಷಣಕ್ಕೆ ಮುನ್ನ ಕಾರ್ಯಕ್ರಮ ಸಂಘಟಕರು, 'ಕರ್ನಾಟಕ ಸರಕಾರ ಒಂದು ಕೋಟಿ ರೂ. ನೀಡುವ ಬಗ್ಗೆ ಮುಖ್ಯಮಂತ್ರಿಯವರು ಹಿಂದಿನ ವರ್ಷ ಪ್ರಕಟಿಸಿದ್ದರು. ಆದರೆ ಹಣ ಇನ್ನೂ ಬಂದಿಲ್ಲ. ಈ ಬಗ್ಗೆ ಕಾರ್ಣಿಕ್ ಅವರಿಂದ ನಾವೆಲ್ಲ ಸಿಹಿಸುದ್ದಿ ನಿರೀಕ್ಷೆಯಲ್ಲಿದ್ದೇವೆ' ಎಂದು ಹೇಳಿದರು.

ಈ ಕಾರ್ಣಿಕ್ ಇದ್ದಾರಲ್ಲ, ಇವರೂ ಸಹ ಬಹಳ ಬೇಗ ರಾಜಕಾರಣದ ವರಸೆಗಳನ್ನೆಲ್ಲ ಮೈಗೂಡಿಸಿಕೊಂಡುಬಿಟ್ಟಿದ್ದಾರೆ. 'ಕರ್ನಾಟಕದಲ್ಲಿ ಕಳೆದ ಒಂದು ವರ್ಷದಿಂದ ಬರೀ ಚುನಾವಣೆ, ನೀತಿ-ಸಂಹಿತೆ. ಈಗ ಪುನಃ ವಿಧಾನ ಪರಿಷತ್ ಚುನಾವಣೆ ಮುಂಚೂಣಿಯಲ್ಲಿದ್ದೇವೆ. ನಾಳೆಯೇ ಮತದಾನ. ನಿಮ್ಮ ಹಣದ ಚೆಕ್ ರೆಡಿಯಾಗಿದೆ. ನಾನು ಬೆಂಗಳೂರಿಗೆ ಹೋದ ಮೂರು ದಿನಗಳೊಳಗೆ ಅಥವಾ ಹೆಚ್ಚೆಂದರೆ ಒಂದು ವಾರದೊಳಗೆ ಚೆಕ್ ಕಳಿಸುವೆ' ಎಂದು ತಮ್ಮ ಭಾಷಣದಲ್ಲಿ ಹಸಿಹಸಿ ಸುಳ್ಳನ್ನು ಹೇಳಿದರು. ಚೆಕ್ ಸಿದ್ಧವಾಗಿದ್ದರೆ ಬರುವಾಗ ತರಬಹುದಿತ್ತಲ್ಲ? ಅದ್ಯಾಕೆ ಚೆಕ್ಕನ್ನು ತರಲಿಲ್ಲ? ಒಂದು ವರ್ಷವಾದರೂ ಹಣ ಕೊಡದಿರುವುದಕ್ಕೆ ಅವರಿಗೇಕೆ ಸ್ವಲ್ಪವೂ ಕಸಿವಿಸಿ, ಮುಜುಗರ ಆಗಲಿಲ್ಲ?

ಸರಿ, ಕಾರ್ಣಿಕ್ ಅವರು ಬಹರೇನ್‌ದಿಂದ ಬೆಂಗಳೂರಿಗೆ ಬಂದು 25 ದಿನಗಳಾಗುತ್ತಾ ಬಂತು. ಮೂರು ದಿನ, ಒಂದು ವಾರದ ಗಡುವೂ ಮುಗಿದು ಹೋಯಿತು. ಆದರೆ ಹಣ ಹೋಗಿಲ್ಲ.

ಬಹರೇನ್ ಕನ್ನಡಿಗರನ್ನು ವಿಚಾರಿಸಿದರೆ, ಪಾಪ, ಅವರಿಗೆ ಆ ವಿಷಯದ ಬಗ್ಗೆ ಮಾತಾಡಲು ಏನೋ ಹಿಂಜರಿಕೆ, ಹಿಂಸೆ! ಕೊಟ್ಟಾಗ ತಗೋತೀವಿ, ಬಂದಾಗ ಬರಲಿ ಬಿಡಿ ಸಾರ್ ಎಂದು ಅಳುಕಿನಿಂದಲೇ ಹೇಳಿದರು.

ವಿದೇಶಕ್ಕೆ ಹೋಗಿ ಮುಖ ಕೆಡಿಸಿಕೊಳ್ಳುವುದೆಂದರೆ ಇದು. ಹಣ ಕೊಡುವ ಆಶ್ವಾಸನೆ ನೀಡದಿದ್ದರೆ ಅಲ್ಲಿನ ಕನ್ನಡಿಗರೇನು ಬೇಸರಿಸಿಕೊಳ್ಳುತ್ತಿರಲಿಲ್ಲ. ಆಶ್ವಾಸನೆ ಕೊಟ್ಟು ಈಡೇರಿಸದಿದ್ದರೆ ಬೇಸರಿಸಿಕೊಳ್ಳದೇ ಇರುತ್ತಾರಾ?

ಅಷ್ಟಕ್ಕೂ ಯಾರಿಗೋ ಹಣ ನೀಡುತ್ತಿಲ್ಲವಲ್ಲ? ಅವರೂ ನಮ್ಮವರೇ, ಕನ್ನಡಿಗರೇ. ಅವರು ಮಾಡುವ ಕನ್ನಡದ ಕೆಲಸಕ್ಕೆ ಸರಕಾರ ಹಣ ನೀಡುತ್ತಿದೆ. ಅದಕ್ಕಿಂತ ಮುಖ್ಯವಾಗಿ ಅಂಥ ಕೆಲಸವನ್ನು ಪ್ರೋತ್ಸಾಹಿಸಿ ಹಣ ನೀಡಬೇಕಾದುದು ಮುಖ್ಯಮಂತ್ರಿಯಾದವರ ಕರ್ತವ್ಯ. ಆದರೆ ಭರವಸೆ ನೀಡಿ ವರ್ಷವಾದರೂ, ಹೇಳಿಕೇಳಿ ಒಂದು ಕೋಟಿ ರೂ. ಬಿಡುಗಡೆ ಮಾಡುವುದಿಲ್ಲ ಅಂದ್ರೆ ಏನರ್ಥ?

ತಮ್ಮ ಬಗ್ಗೆ, ತಮ್ಮ ಘನ ಸರಕಾರದ ಬಗ್ಗೆ ವಿದೇಶಗಳಲ್ಲಿರುವ ಕನ್ನಡಿಗರು ಏನು ಭಾವಿಸಬಹುದು ಎಂಬುದನ್ನು ಯಡಿಯೂರಪ್ಪನವರು ಚಿಂತಿಸಬೇಕು. ಕಾರ್ಣಿಕ್ ಅವರಂಥ ನಿಷ್ಠಾಯೋಜಕರನ್ನು ಕರೆದು ಆದ ವಿಳಂಬಕ್ಕೆ ಕಾರಣ ಕೇಳಬೇಕು. ಬೇರೇನೂ ಸಬೂಬು ಹೇಳದೇ ಆದಷ್ಟು ಬೇಗ ಬಹರೇನ್ ಸ್ನೇಹಿತರಿಗೆ ಹಣ ತಲುಪಿಸಿ ಕೊಟ್ಟ ವಚನವನ್ನು ಈಡೇರಿಸಬೇಕು.

ಅನಂತ ಹೆಗಡೆ ಬಗ್ಗೆ ಮತ್ತಷ್ಟು...

ಕಳೆದ ವಾರ ಈ ಅಂಕಣದಲ್ಲಿ ಪಶ್ಚಿಮಘಟ್ಟ ಸಂರಕ್ಷಣ ಕಾರ್ಯಪಡೆ ಮುಖ್ಯಸ್ಥ ಹಾಗೂ ಪರಿಸರವಾದಿ ಅನಂತ ಹೆಗಡೆ ಅಶೀಸರ ಅವರ ಪತ್ರಿಕಾ ಹೇಳಿಕೆ ನೀಡುವುದರ ತವಲಿನ ಬಗ್ಗೆ ಪ್ರಸ್ತಾಪಿಸಲಾಗಿತ್ತಷ್ಟೆ. ಇದಕ್ಕೆ ಶಿರಸಿ, ಕಾರವಾರ ಹಾಗೂ ಶಿವಮೊಗ್ಗದಿಂದ ಬಹಳ ಓದುಗರು ಪ್ರತಿಕ್ರಿಯಿಸಿದ್ದಾರೆ.

ಶಿರಸಿಯಿಂದ ಚಂದ್ರಶೇಖರ ಹೆಗಡೆ ಎಂಬವವರು ಬರೆದ ಪತ್ರದಲ್ಲಿ ಹೀಗೆ ಹೇಳಿದ್ದಾರೆ- 'ಅನಂತ ಹೆಗಡೆಯವರು ಪತ್ರಿಕಾ ಹೇಳಿಕೆ ನೀಡಿ ಹೇಗೆ ಪ್ರಚಾರ ಪಡೆಯಬೇಕೆಂಬುದರಲ್ಲಿ ನಿಪುಣರು. ಆ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವರು. ಉಳಿದವರು ಪರಿಶ್ರಮ ಪಟ್ಟು ಕೆಲಸ ಮಾಡಿ ಪತ್ರಿಕೆಗಳಲ್ಲಿ ಪ್ರಚಾರ ಪಡೆದರೆ, ಅನಂತ ಹೆಗಡೆಯವರು ಅದನ್ನು ಕುಳಿತಲ್ಲಿಯೇ ಮಾಡಬಲ್ಲರು. ಪತ್ರಿಕಾ ಹೇಳಿಕೆಯಲ್ಲಿ ಅವರಿಗಿರುವ ಅಚಲ ನಂಬಿಕೆ, ವಿಶ್ವಾಸ ಅಂಥದು. ತಾವು ಪರಿಸರವಾದಿ ಎಂಬುದನ್ನು ಸಾರ್ವಜನಿಕರಲ್ಲಿ ಅಚ್ಚೊತ್ತುವಂತೆ ಮಾಡಿದ್ದೇ ಪತ್ರಿಕಾ ಹೇಳಿಕೆಗಳಿಂದ. ಇವರಿಗಿಂತ ಅನೇಕರು ಪರಿಸರದ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಮಾಡಿಕೊಂಡು ಬಂದಿದ್ದಾರೆ. ಆದರೆ ಅವರಿಗೆ 'ಪರಿಸರವಾದಿ' ಎಂದು ಕರೆಯಿಸಿ ಕೊಳ್ಳಲೂ ಸಾಧ್ಯವಾಗಿಲ್ಲ. ಅದೇ ಅನಂತ ಹೆಗಡೆಯವರು ಹಾಗಲ್ಲ, ತಾವೆಂಥ ಖ್ಯಾತ ಪರಿಸರವಾದಿ ಎಂಬುದನ್ನು ಪತ್ರಿಕಾ ಹೇಳಿಕೆಗಳಿಂದಲೇ ಸಾಬೀತುಪಡಿಸಿದ್ದಾರೆ. ನಿಜಕ್ಕೂ ಅವರು ಪತ್ರಿಕಾ ಪ್ರಕಟಣೆಗೆ ಆಭಾರಿಯಾಗಿರಬೇಕು.'

ಉತ್ತರ ಕನ್ನಡದ ಪತ್ರಕರ್ತರೊಬ್ಬರು ಹೆಗಡೆಯವರ ಪತ್ರಿಕಾ ಹೇಳಿಕೆಗಳ ಕೆಲವು ಸ್ಯಾಂಪಲ್‌ಗಳನ್ನು ಕಳಿಸಿಕೊಟ್ಟಿದ್ದಾರೆ. ಅವರ ಪ್ರಕಾರ ಅನಂತ ಹೆಗಡೆ ಕಳೆದ ಆರು ತಿಂಗಳಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ಸಲ ಪತ್ರಿಕಾ ಹೇಳಿಕೆ ಕಳಿಸಿದ್ದಾರಂತೆ.

ಈ ಪತ್ರಕರ್ತರು ಬರೆದ ಕಿಡಿಗೇಡಿ ನುಡಿ ಓದಿ ನಗು ಬಂತು. ಅವರು ಬರೆದಿದ್ದರು- ''ಅನಂತ ಹೆಗಡೆಯವರು ಪತ್ರಿಕಾ ಹೇಳಿಕೆ ನೀಡುವ ತಮ್ಮ ಚಾಳಿಯನ್ನು ಮುಂದುವರಿಸಿದರೆ, ಪಶ್ಚಿಮಘಟ್ಟದ ಕಾಡು ಬರಿದಾಗುವ ದಿನ ದೂರವಿಲ್ಲ!''

ಅಬ್ಬಬ್ಬಾ!

ಹೆರಾಲ್ಡ್ ಇವಾನ್ಸ್ ಉವಾಚ

'ನಾನು ಆ ಮಂತ್ರಿಗೆ ಕ್ಲೋಸು, ಈ ಮಂತ್ರಿ ನನ್ನ ಮಾತನ್ನು ತೆಗೆದುಹಾಕೊಲ್ಲ, ಮುಖ್ಯಮಂತ್ರಿ ನನ್ನನ್ನು ನಿತ್ಯ ಸಂಪರ್ಕಿಸುತ್ತಾರೆ, ಆ ಮಂತ್ರಿಯಂತೂ ನನಗೆ ಬಹಳ ಬೇಕಾದವರು'. ಹೀಗೆಲ್ಲ ಕೆಲವು ಪತ್ರಕರ್ತರು (ಸಂಪಾದಕರೂ ಸೇರಿ) ಬಡಾಯಿಕೊಚ್ಚಿಕೊಳ್ಳುವುದನ್ನು ನೀವು ಕೇಳಿರಬಹುದು. ಇದು ನಿಜವಿದ್ದಿರಬಹುದು. ಒಂದು ವೇಳೆ ನಿಜವಿದ್ದರೆ ಯಾರೂ ಸಹ ಓಪನ್ ಆಗಿ ಹೇಳಿಕೊಳ್ಳುವುದಿಲ್ಲ ಬಿಡಿ.

ಇಂಥ ಮಾತುಗಳನ್ನು ಕೇಳಿದಾಗ, ಒಂದೋ ಭೋಂಗು ಬಿಡುತ್ತಿದ್ದಾನೆ ಎಂದು ತಿಳಿಯಬಹುದು. ಇಲ್ಲವೇ ತನ್ನ ಬಗೆಗಿನ ಭ್ರಾಂತಿ, ಭ್ರಮೆಯಿಂದ ನರಳುತ್ತಿದ್ದಾನೆಂದು ಭಾವಿಸಬಹುದು. ಕೆಲ ಪತ್ರಕರ್ತರು ತಮ್ಮ ಹೆಂಡತಿಯ ಮುಂದೆ ಸಹ ಹೀಗೇ ಹೇಳಿ, ಅವರನ್ನು ನಂಬಿಸುವ ಹರಸಾಹಸ ಮಾಡುತ್ತಾರೆ. (ಆದರೆ ಹೆಂಡತಿ ಎಷ್ಟೇ ಮುಗ್ಧೆಯಾಗಿರಲಿ, ಅವಳು ಈ ಮಾತುಗಳನ್ನೆಲ್ಲ ನಂಬುವಷ್ಟು ಮುಗ್ಧೆಯಾಗಿರುವುದಿಲ್ಲ. ಅದೂ ಸಹ ಪತ್ರಿಕೋದ್ಯಮ ಆಕೆಗೆ ಕಲಿಸಿದ ಪಾಠ.)

ಇರಲಿ. ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಕ್ಲೋಸ್ ಆಗುವುದು ಪತ್ರಕರ್ತನಿಗೆ ಭೂಷಣ ಅಲ್ಲ, ಅವರೊಂದಿಗಿನ ಸಂಬಂಧವನ್ನು ಕ್ಲೋಸ್ಡ್ ಮಾಡಿಕೊಳ್ಳುವುದೇ ಒಳ್ಳೆಯದು. ಖ್ಯಾತ ಬ್ರಿಟಿಷ್ ಸಂಪಾದಕ ಹೆರಾಲ್ಡ್ ಇವಾನ್ಸ್ ಇತ್ತೀಚಿನ ಸಂದರ್ಶನದಲ್ಲಿ ಹೀಗೆ ಹೇಳಿದ್ದಾನೆ- 'ಎಲ್ಲ ರಾಜಕಾರಣಿಗಳು ನಿಮ್ಮ (ಪತ್ರಕರ್ತ) ಬಗ್ಗೆ ಸಾತ್ವಿಕವಾಗಿ ಮುಗು ಮುರಿಯುತ್ತಾರೆ, ನಿಮ್ಮಿಂದ ಅಂತರ ಕಾಪಾಡಲು ಬಯಸುತ್ತಿದ್ದಾರೆ ಅಂದ್ರೆ ನೀವು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೀರಿ ಎಂದರ್ಥ. ನಿಮ್ಮ ಮಾತನ್ನು ಕೇಳುವಷ್ಟು ಹತ್ತಿರವಾಗಬೇಡಿ. ಆದರ ಬದಲು ನೀವು ರಾಜಕಾರಣವನ್ನೇ ಸೇರಿಬಿಡಿ. ಅದರಿಂದ ಪತ್ರಿಕೋದ್ಯಮ-ರಾಜಕಾರಣಕ್ಕೆರಡಕ್ಕೂ ಲಾಭ.

ಎಂಥ ಸತ್ಯವಾದ ಮಾತು!

ವಕ್ರತುಂಡೋಕ್ತಿ

ಸುಳ್ಳು ಹೇಳಬಾರದೆಂಬುದು ಎಲ್ಲರಿಗೂ ಗೊತ್ತು. ಆದರೆ ಸತ್ಯ ಹೇಳಿದರೆ ನೋವಾಗುವುದರಿಂದ ಎಲ್ಲರೂ ಸುಳ್ಳು ಹೇಳುತ್ತಾರೆ.

ಅನುರಾಗದ ರಂಧನ - ಸಂಭ್ರಮಿಸಿದ ಹೃನ್ಮನ

ಪರಾಗ ಸ್ಪರ್ಶ

ಶ್ರೀವತ್ಸ ಜೋಶಿ
sjoshi@vijaykarnataka.com

ಶತಾವಧಾನಿ ಆರ್.ಗಣೇಶ್ ಅವರ ಮನೆಗೆ ಹೋಗಿದ್ದೆ. ಬೆಂಗಳೂರಿನ ರಾಜಾಜಿನಗರದಲ್ಲಿ ಒಂದಿಷ್ಟು ಮರಗಳು ಇಕ್ಕೆಲಗಳಲ್ಲಿ ಇನ್ನೂ ಬದುಕುಳಿದಿರುವ ಒಂದು ಬೀದಿಯಲ್ಲಿ ಅವರ ಮನೆ. ಸರಳಾತಿಸರಳ ಸ್ವಭಾವದ ಗಣೇಶ್ ಅಲ್ಲಿ ತನ್ನ ತಾಯಿಯವರೊಂದಿಗೆ ವಾಸಿಸುತ್ತಾರೆ. ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದವರು ನನ್ನೊಬ್ಬ ಓದುಗಮಿತ್ರ/ಹಿತೈಷಿ ರಮೇಶ್ ಭಟ್ ಎಂಬವರು. ಅವರು ಹೋಟೆಲ್ ಉದ್ಯಮಿ. ರಾಜಾಜಿನಗರದಲ್ಲೇ ಎರಡು ರೆಸ್ಟೊರೆಂಟ್‌ಗಳು ಮತ್ತೊಂದು ಐಸ್‌ಕ್ರೀಮ್ ಪಾರ್ಲರ್‌ನ ಮಾಲೀಕ. ಐದು ನಿಮಿಷಕ್ಕೆ ಎಂಟು ದೂರವಾಣಿ ಕರೆಗಳನ್ನು ಅಟೆಂಡ್ ಮಾಡಬೇಕಷ್ಟು ಬ್ಯುಸಿ. ಆದಾಗ್ಯೂ ದಿನಾಲೂ ಕನ್ನಡ ಓದಿಗೆ, ಸಾಹಿತ್ಯಾರ್ಜನೆಗೆ ಅಂತ ಸ್ವಲ್ಪ ಹೊತ್ತನ್ನು ಕಂಡುಕೊಳ್ಳುವ ಇಂಟರೆಸ್ಟಿಂಗ್ ವ್ಯಕ್ತಿ.

ಗಣೇಶ್ ಜತೆ ಕುಶಲೋಪರಿ ಸಂವಾದದಲ್ಲಿ ಹೀಗೇ ಏನೋ ಭಾಷೆಗಳ ಸಾಮ್ಯತೆ ಸ್ವಾರಸ್ಯ ಸೋಜಿಗಗಳ ಬಗ್ಗೆ ಮಾತು ಬಂತು. ಅವರೋ ಹದಿನೆಂಟು ಭಾಷೆಗಳನ್ನು ಅರೆದು ಕುಡಿದವರು. ನಾನು ಅಷ್ಟೊಂದು ಭಾಷೆಗಳನ್ನು ಬಲ್ಲವನಲ್ಲ, ಆದರೆ ಭಾಷೆಗಳ ಸೊಗಡು ಸ್ವಾರಸ್ಯಗಳು ನನಗೂ ಆಸಕ್ತಿಯ ವಿಷಯವೇ. ನನ್ನ ಮನೆಮಾತು ಚಿತ್ಪಾವನಿ (ಮರಾಠಿಯ ಒಂದು ನಮೂನೆ) ಎಂದು ಗೊತ್ತಿರುವ ಗಣೇಶ್, ನಮ್ಮ ಭಾಷೆಯಲ್ಲೂ ಸಂಸ್ಕೃತ ಮೂಲದ ಕೆಲವು ಶಬ್ದಗಳಿವೆಯೆಂದು ಸೋದಾಹರಣವಾಗಿ ಬಣ್ಣಿಸಿದರು. 'ರಾಂಧಪ' (ಕನ್ನಡದಲ್ಲಿ ಅದರರ್ಥ ಅಡುಗೆ ಎಂದು) ಅಂತಹ ಒಂದು ಶಬ್ದ. ಅದು ಸಂಸ್ಕೃತದ 'ರಂಧನ' (ಅಡುಗೆ ಎಂದೇ ಅರ್ಥ) ಪದದಿಂದ ಬಂದದ್ದು. ಕನ್ನಡದಲ್ಲಿ ನೃತ್ಯರೂಪಕದ ಪದ್ಯವೊಂದರಲ್ಲಿ 'ರಂಧನ' ಪದವನ್ನು ತಾನು ಬಳಸಿಕೊಂಡದ್ದನ್ನೂ ಗಣೇಶ್ ನೆನಪಿಸಿಕೊಂಡರು. ''ರಾಗದ ಬಂಧನ ಸೊಗಸಾಯ್ತು ಅನು-ರಾಗದ ರಂಧನ ರುಚಿಯಾಯ್ತು... ನಾಗನರ್ತನಕೆ ಭೋಗವರ್ತನಕೆ ಭಾಗಿಯಾಗೆ ನೀ ಸೊಗಸಾಯ್ತು...'' ಪದ್ಯವನ್ನು ಸರಾಗವಾಗಿ ಹಾಡೇಬಿಟ್ಟರು!

ಅದೇನು ಚಮತ್ಕಾರವೋ ಏನೋ, ಗಣೇಶ್ ಮಾತುಗಳನ್ನು ಮೈಯೆಲ್ಲ ಕಿವಿಯಾಗಿ ಕೇಳುತ್ತಿದ್ದ ನನಗೂ ರಮೇಶ್ ಭಟ್ಟರಿಗೂ 'ಅನುರಾಗದ ರಂಧನ' ಎಂಬ ಪದಪುಂಜವು ಏಕಪ್ರಕಾರವಾಗಿ ತಟ್ಟಿತು! ನಾಲ್ಕು ಸಾಲುಗಳ ಸುಂದರ ಪದ್ಯದಲ್ಲಿ ಅದೊಂದು ಮಾತ್ರ ವಿಶೇಷ ಹಿತಾನುಭವ ಕೊಟ್ಟಿತು! ಏಕಿರಬಹುದು? ನೀವೇ ಒಮ್ಮೆ ಯೋಚಿಸಿ. ಅನುರಾಗದ ರಂಧನ ಎನ್ನುವುದು ನಿಜಕ್ಕೂ ಎಷ್ಟು ಚಂದದ, ಎಷ್ಟು ಅರ್ಥಪೂರ್ಣವಾದ ವರ್ಣನೆ! ರಂಧನವೇ ರುಚಿರುಚಿ. ಅದರೊಂದಿಗೆ ಅನುರಾಗವೂ ಸೇರಿಕೊಂಡರೆ ಕೇಳಬೇಕೇ!

ರಮೇಶ್ ಭಟ್ ಓರ್ವ ಹೋಟೆಲ್ ಉದ್ಯಮಿ ಎಂದೆನಲ್ಲ, ಅದು ಅವರ ಜೀವನವೃತ್ತಿ. ಸ್ವಭಾವತಃ ನೇರ ನಡೆ-ನುಡಿಗಳ ಆ ಮನುಷ್ಯ ಬರೀ ವ್ಯಾಪಾರಿಮನೋಭಾವವೊಂದನ್ನೇ ಮೈಗೂಡಿಸಿಕೊಂಡವರಲ್ಲ. ತನ್ನ ಗಿರಾಕಿಗಳಿಗೆ ಅತ್ಯುತ್ತಮ ಸೇವೆ ಸಲ್ಲಬೇಕು, ರುಚಿಶುಚಿಯಾದ ಉತ್ಕೃಷ್ಟ ಗುಣಮಟ್ಟದ ತಿಂಡಿತಿನಿಸನ್ನೇ ಒದಗಿಸಬೇಕು ಎಂದು ವಿಶೇಷವಾದ ಗ್ರಾಹಕಪ್ರೀತಿ ಉಳ್ಳವರು. ಆ ಪ್ರೀತಿ ಅವರಲ್ಲಿರುವುದರಿಂದಲೇ ಅವರ ಹೊಟೇಲಿನ ತಿಂಡಿ ಹೆಚ್ಚು ರುಚಿ! ಹಾಗಾಗಿ ಅನುರಾಗದ ರಂಧನ ಅಥವಾ 'ಪ್ರೀತಿಯಿಂದ ಮಾಡಿದ ಅಡುಗೆ' ಎಂಬ ಕಲ್ಪನೆಗೆ ಅವರು ತನ್ನನ್ನು ಸುಲಭವಾಗಿ ರಿಲೇಟ್ ಮಾಡಿಕೊಂಡಿರಬಹುದು. ಶತಾವಧಾನಿಯ ಪದ್ಯದಲ್ಲಿನ ಆ ಸಾಲು ಅವರಿಗೆ ಸಹಜವಾಗಿಯೇ ರೋಮಾಂಚನ ತಂದಿರಬಹುದು.

ನನಗೂ ಆ ಸಾಲು ತುಂಬಾ ಹಿಡಿಸಲಿಕ್ಕೆ ಕಾರಣಗಳಿವೆ! ಈ ವಾರದ ಅಂಕಣವನ್ನು ರಂಧಿಸಲಿಕ್ಕೆ ಒಳ್ಳೆಯ ಸಾಮಗ್ರಿ ಸಿಕ್ತು ಎನ್ನುವುದು ಒಂದು ಕಾರಣವ